Mr. SPEAKER.—I am only trying to gather the sense of the House. If members want a discussion today, we shall have it. If the House does not want it, let us have it on another day.

Sri B. P. GANGADHAR (Tumkur) —May I submit with respect to scarcity conditions prevailing in the State, it is a burning problem and it is a very important issue where many people have been going without food. It is a very important matter. So, kindly give some latitude and time may be given liberally to every Member to express his difficulties.

Mr. SPEAKER.—I say it is so important that should be taken up immediately.

Sri H. SIDDAVEERAPPA.—The point really I wanted to bring to your kind notice is that Government have made two statements. These statements are very important, particularly the one made by the Revenue Minister is a very voluminous one. We shall be obliged if copies of the same are made available to us and then a discussion commences. That would be better. We will have some other day for this discussion and a day may be allotted for this subject so that Members may come prepared.

Mr. SPEAKER.—That is for the Business Advisory Committe.

THIRD REPORT OF THE COMMITTEE ON PRIVATE MEMBERS' BILLS AND RESOLUTIONS

Presentation.

Mr. SPEAKER.—Now Presentation of the Report.

Sri D. MANJUNATH (Chairman).—I beg to present the Third Report of the Committee on Private Members' Bills and Resolutions.

Mr. SPEAKER.—The Report is presented.

Then, we will go to private Member's Business. Sri T. R. Shamanna to move his resolution.

PRIVATE MEMBERS' RESOLUTION *re*: TAKING STEPS TO HOLD ELECTIONS TO THE BANGALORE CITY CORPORATION DURING THE NEXT YEAR.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ, ನನ್ನ ನಿರ್ಣಯ ಹೀಗಿದೆ: "ತಮ್ಮ ಚುನಾಯಿತ ಪ್ರತಿನಿಧಿಗಳು ನಗರ ಸಭೆಯ ಆಡಳಿತ ನಡೆಸುವುದನ್ನು ಬೆಂಗಳೂರಿನ ನಾಗರಿಕರಿಗೆ ಇಲ್ಲದಂತೆ ಮಾಡಿರುವುದರಿಂದ ಮುಂದಿನ ವರ್ಷ ಎಂದಿನಂತೆ ಚುನಾವಣೆಗಳನ್ನು ನಡೆಸಲು ಸರ್ಕಾರದವರು ಕ್ರಮಗಳನ್ನು ಕೈಗೊಳ್ಳಬಹುದೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಅಧ್ಯಕ್ಷರು.—ಸಭೆಯ ಮುಂದಿರುವ ನಿರ್ಣಯ ಹೀಗಿದೆ : ''ತಮ್ಮ ಚುನಾಯಿತ ಪ್ರತಿನಿಧಿಗಳು ನಗರ ಸಭೆಯ ಆಡಳಿತ ನಡೆಸುವುದನ್ನು ಬೆಂಗಳೂರಿನ ನಾಗರಿಕರಿಗೆ ಇಲ್ಲದಂತೆ ಮಾಡಿರುವುದರಿಂದ ಮುಂದಿನ ವರ್ಷ ಎಂದಿನಂತೆ ಚುನಾವಣೆಗಳನ್ನು ನಡೆಸಲು ಸರ್ಕಾರದವರು ಕ್ರಮಗಳನ್ನು ಕೈಗೊಳ್ಳಬಹುದೆಂದು ಈ ಸಭೆಯುವರು ಅಭಿಪ್ರಾಯ ಪಡುತ್ತಾರೆ.

ಈ ನಿರ್ಣಯವನ್ನು ಮಂಡಿಸಲಾಗಿದೆ. ಸಭೆಯಲ್ಲಿ ಇದು ಚರ್ಚೆಯಾಗಬಹುದು.''

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಪತಿಗಳೇ, ಈ ಸಾಲಿನ ಖಾಸಗೀ ನಿರ್ಣಯಗಳನ್ನು ಈ ಸಭೆಯಲ್ಲಿ ತೆಗೆದುಕೊಳ್ಳುವುದಕ್ಕೆ ಮೊದಲನೆಯ ಅವಕಾಶ ನನಗೆ ಸಿಕ್ಕಿದ್ದಕ್ಕೆ ನಾನು ಹೆಮ್ಮೆ ಪಡುತ್ತೇನೆ. ಈ ನಿರ್ಣಯದ ಬಗ್ಗೆ ನಿನ್ನೆಯ ದಿನ ಸಾಕಷ್ಟು ಚರ್ಚೆಯಾಗಿದೆ. ಆದ್ದರಿಂದ ಮೊದಲು ಹೇಳಿದ ವಿಚಾರಗಳನ್ನು ಪುನಃ ಹೇಳದೆ ಹೊಸ ವಿಚಾರಗಳನ್ನು ಮಾತ್ರ ನಾನು ಹೇಳುತ್ತೇನೆ ಮತ್ತು ಈ ನಿರ್ಣಯದ ಬಗ್ಗೆ ಸಮರ್ಥನೆ ನೀಡುತ್ತೇನೆ. ಈಗ ಬೆಂಗಳೂರು ನಗರದ ಕಾರ್ಪೋರೇಷನ್ ರದ್ದಾಗಿದೆ. ಬೆಂಗಳೂರು ನಗರಕ್ಕೆ ಇದ್ದಂತಹ ಮುತ್ತೈದೆತನ ಹೋಗಿ ವೈಧವ್ಯ ಬಂದಿರುವುದು ಶೋಚನೀಯ ವಿಚಾರ. ಮೊನ್ನೆ ದಿನ ರಾಷ್ಟ್ರಾಧ್ಯಕ್ಷರು ಮೊದಲನೆಯ ಬಾರಿಗೆ ಬೆಂಗಳೂರಿಗೆ ಬಂದಿದ್ದಾಗ ಅವರಿಗೆ ಪೌರ ಸನ್ಮಾನವನ್ನು ಕೊಡಬೇಕಾಗಿತ್ತು. ಇದು ಸಾಧಾರಣವಾಗಿ ಮೊದಲಿನಿಂದಲೂ ನಡೆದುಕೊಂಡು ಬಂದಿರುವ ಪದ್ಧತಿ. ಆದರೆ ಸರ್ಕಾರದವರು ಮಾಡಿರತಕ್ಕ ಒಂದು ಅನೀತಿಯ ಕ್ರಮದಿಂದ ಬೆಂಗಳೂರಿನ ನಾಗರೀಕರಪರವಾಗಿ ರಾಷ್ಟ್ರಾಧ್ಯಕ್ಷರಿಗೆ ಪೌರಸನ್ಮಾನವನ್ನು ಕೊಡುವುದಕ್ಕೆ ಅವಕಾಶವಾಗಲಿಲ್ಲ ಎಂದು ನಾನು ವಿಷಾದಪಡಬೇಕಾಗಿದೆ. ದೆಹಲಿಯಲ್ಲಿ ಮುತ್ತೈದೆ ಸರ್ಕಾರವಿಲ್ಲದ ಹಾಗೆ ಬೆಂಗಳೂರು ನಗರಕ್ಕೆ ಮುತ್ತೈದೆ ಸರ್ಕಾರ ಇಲ್ಲ ಎಂದು ವ್ಯಥೆ ಪಡಬೇಕಾಗಿದೆ. ಬೆಂಗಳೂರು ನಗರ ಇಡೀ ಭಾರತದಲ್ಲಿ ಒಂದು ಪ್ರಾಮುಖ್ಯವಾದಂತಹ ಪಟ್ಟಣ. ಈ ದೇಶದಲ್ಲಿ ಅನೇಕ ಪೌರಾಡಳಿತ ಇದ್ದಂತಹ ನಗರಗಳಲ್ಲಿ ಬೆಂಗಳೂರು ನಗರ ಮೊದಲನೆಯದು. ಬೆಂಗಳೂರು ನಗರಕ್ಕೆ ನಗರಾಡಳಿತ ಬಂದು 100 ವರ್ಷಗಳಾಗಿವೆ. ಶತಮಾನೋತ್ಸವವನ್ನು ಆಚರಿಸಬೇಕಾದ ಕಾಲದಲ್ಲಿ ಸರ್ಕಾರದವರು ಕಾರ್ಪೋರೇಷನ್ ಅನ್ನು ಸೂಪರ್‌ಸೀಡ್ ಮಾಡಿದ್ದು ಬಹಳ ಶೋಚನೀಯ. ಬೆಂಗಳೂರು ನಗರದ ಪೌರಾಡಳಿತ ಬಹಳ ಚೆನ್ನಾಗಿ ದಕ್ಷತೆಯಿಂದ ಆಡಳಿತವನ್ನು ನಡೆಸಿಕೊಂಡು ಬಂದಿತ್ತು. ಶ್ರೀಮಾನ್ ಬಿ. ಕೆ. ಗರುಡಾಚಾರ್, ಶ್ರೀಮಾನ್ ಕೆ. ಟಿ. ಬಾಷ್ಯಂ ಮತ್ತು ಶ್ರೀಮಾನ್ ಕೆ. ಹನುಮಂತಯ್ಯ ಮತ್ತಿತರರು ಬೆಂಗಳೂರು ನಗರ ಸಭೆಯ ಅಧ್ಯಕ್ಷರಾಗಿದ್ದಾಗ ನಗರ ಸಭೆ ಒಳ್ಳೆಯ ಹೆಸರನ್ನು ತೆಗೆದುಕೊಂಡಿತ್ತು. ಎಂದರೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ. ಸ್ವಾತಂತ್ರ್ಯ ಬಂದಮೇಲೆ ಕಾಂಗ್ರೆಸ್ಸಿನಲ್ಲಿ ಜನಗಳು ನಂಬಿಕೆ ಇಟ್ಟು, ಚುನಾವಣೆಗೆ ನಿಂತುಕೊಂಡು ನೂರಕ್ಕೆ ನೂರು ಜನ ಕಾಂಗ್ರೆಸ್ ಅಭ್ಯರ್ಥಿಗಳನ್ನು ಜನರೇ ಚುನಾಯಿಸುತ್ತಿದ್ದರು. ಆಮೇಲೆ ಬರುತ್ತಾ ಬರುತ್ತಾ ಕಾಂಗ್ರೆಸ್ ಅಭ್ಯರ್ಥಿಗಳನ್ನು ಚುನಾಯಿಸುವುದು ಕಡಿಮೆಯಾಗಿದೆ. ಜನಗಳಲ್ಲಿ ಇದ್ದಂತಹ ನಂಬಿಕೆಯನ್ನು ಕಾಂಗ್ರೆಸ್ಸಿನವರು ಕಳೆದುಕೊಂಡಿದ್ದಾರೆ ಕಾಂಗ್ರೆಸ್ಸಿನವರು ಬೆಂಗಳೂರಿನ ಜನತೆಯಲ್ಲಿದ್ದಂತಹ ನಂಬಿಕೆಯನ್ನು ಕಳೆದುಕೊಂಡು ಕಾರ್ಪೋರೇಷನನ್ನು ರದ್ದುಮಾಡಿ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿರತಕ್ಕದ್ದು ಬಹಳ ಶೋಚನೀಯವಾದ ವಿಚಾರ ಈ ಸರ್ಕಾರದವರು ಕಾರ್ಪೋರೇಷನನ್ನು ಸೂಪರ್‌ಸೀಡ್ ಮಾಡುವುದಕ್ಕೆ 14 ಕಾರಣಗಳನ್ನು ಕೊಟ್ಟು ಸೂಪರ್‌ಸೀಡ್ ಮಾಡಿದ್ದಾರೆ. ಇದರಲ್ಲಿ 11 ಕಾರಣಗಳು ಸಕಾರಣವಾಗಿಲ್ಲ ಎಂದು ಹೈಕೋರ್ಟಿನವರು ಅವುಗಳನ್ನ ತಳ್ಳಿಹಾಕಿದರು. ಉಳಿದ ಕಾರಣಗಳು ಎಂದರೆ, ಕಾರ್ಪೋರೇಷನ್‌ನಲ್ಲಿ ಹಣ ದುರುಪಯೋಗವಾಗಿರಲಿಲ್ಲ, ಕಾರ್ಪೋರೇಷನ್ ಆಡಳಿತ ದುರಾಡಳಿತವಾಗಿರಲಿಲ್ಲ ಯಾವುದೋ ಸಾಮಾನ್ಯವಾದ 3 ಕಾರಣಗಳಿಗೋಸ್ಕರ ಕಾರ್ಪೋರೇಷನನ್ನ ಸೂಪರ್‌ಸೀಡ್ ಮಾಡಿದರು. ಈ ಮೂರು ಕಾರಣಗಳ ಪೈಕಿ ಒಂದು 500 ಸಬ್ಜೆಕ್ಟುಗಳು ಇತ್ಯರ್ಥವಾಗದೆ ಹಾಗೆಯೇ ಬಾಕಿ ನಿಂತಿವೆ ಎನ್ನುವ ಒಂದು ಕಾರಣ ಆ 500 ಸಬ್ಜೆಕ್ಟುಗಳು ಇತ್ಯರ್ಥವಾಗದೇ ಉಳಿಯುವುದಕ್ಕೆ ಕಾರಣ ಇಷ್ಟೆ. ಸಾಧಾರಣವಾಗಿ ಕಾರ್ಪೋರೇಷನ್ನಿನಲ್ಲಿ 200-300 ಸಬ್ಜೆಕ್ಟುಗಳು ಉಳಿದುಕೊಂಡೇ ಬರುತ್ತಿದ್ದುವು. ನಾನ್ ಕಾಂಗ್ರೆಸ್ ಮೇಯರ್ ಅಧಿಕಾರದಲ್ಲಿದ್ದಾಗ ಎಲ್ಲಾ ಸಬ್ಜೆಕ್ಟುಗಳೂ ಪಾಸಾಗಿ, ಸೈಟುಗಳನ್ನು ವಿಲೇವಾರಿ ಮಾಡುವುದಕ್ಕೆ ಸಂಬಂಧಪಟ್ಟ ಕೆಲವು ಸಬ್ಜೆಕ್ಟುಗಳು ಉಳಿದಿದ್ದವು ಆ ಮೇಲೆ ಕಾಂಗ್ರೆಸ್ ಮೇಯರು ಅಧಿಕಾರಕ್ಕೆ ಬಂದ ತಕ್ಷಣ, ಹೆಚ್ಚು ಸಬ್ಜೆಕ್ಟು ಪಾಸಾಗದೆ ಉಳಿದವು. ಆ ಸಬ್ಜೆಕ್ಟುಗಳಲ್ಲಿ 1 ರಿಂದ 80 ರವರೆಗೆ 200 ಸೈಟುಗಳನ್ನು ವಿಲೇವಾರಿ ಮಾಡುವುದಕ್ಕೆ ಸಂಬಂಧಪಟ್ಟವುಗಳು ಒಂದು ದಿನ ಆ 1 ರಿಂದ 80 ಸಬ್ಜೆಕ್ಟ್ ಪಾಸಾಯಿತೆಂದರು. ಆ ಸೈಟುಗಳನ್ನು ತಮಗೆ ಬೇಕಾದವರಿಗೆ ಹಂಚಿಕೆ ಮಾಡಿದ್ದರು. ಸರಿಯಾದ ರೀತಿಯಲ್ಲಿ ಅವು ಹಂಚಿಕೆ ಮಾಡದಿದ್ದ ಕಾರಣ ಆ ಸಬ್ಜೆಕ್ಟುಗಳು [illegible] ಸಭೆಯಲ್ಲಿ ಸರಿಯಾದ ರೀತಿ ತೀರ್ಮಾನ ಆಗುವವರೆವಿಗೆ ಬೇರೆ ಸಬ್ಜೆಕ್ಟ್ ಆಗಲು ಅವಕಾಶ ಕೊಡದಿದ್ದೇ ನಾನ್ ಕಾಂಗ್ರೆಸಿನವರ ದೊಡ್ಡ

(ಶ್ರೀ ಟಿ. ಆರ್. ಶಾಮಣ್ಣ)

ತಪ್ಪು. ಅಮೇಲೆ ಕುಡಿಯುವ ನೀರು ಸರಬರಾಜಿಗೆ ಸಂಬಂಧಪಟ್ಟ ಹಾಗೆ ಉಚಿತ ನೀರಿನ ಸೌಲಭ್ಯವನ್ನು ಒದಗಿಸುವ ಬಗ್ಗೆ ಒಂದು ನಿರ್ಣಯವನ್ನು ನಗರ ಸಭೆಯಲ್ಲಿ ತಂದಿಟ್ಟು ಪಾಸ್ ಆಯಿತು ಎಂದು ಹೇಳಿ ಮೇಯರು ಎದ್ದುಹೋದರು. ಅದನ್ನು ನಾನ್ ಕಾಂಗ್ರೆಸ್ ಸದಸ್ಯರು ಒಪ್ಪಲಿಲ್ಲ. ಕಾರ್ಪೊರೇಷನ್ನಿಗೆ ಸೇರಿದ್ದ ಕೆಲವು ಜಾಗಗಳನ್ನು ಕಾಂಗ್ರೆಸ್ಸಿನವರು ತೆಗೆದುಕೊಂಡಿದ್ದರಿಂದ ಅದಕ್ಕೆ ನಾನ್ ಕಾಂಗ್ರೆಸ್ಸಿನವರು ಪ್ರತಿಭಟನೆಯನ್ನು ಸೂಚಿಸಿ ಅದಕ್ಕೆ ಸಂಬಂಧಪಟ್ಟ ಕೆಲವು ಸಬ್ಜೆಕ್ಟುಗಳು ಹಾಗೆಯೇ ಉಳಿದಿದ್ದವು. ಹೀಗೆ ನಾನಾ ಕಾರಣಗಳಿಂದ ಕಾಂಗ್ರೆಸ್ಸಿನವರು ಅಕ್ರಮವಾದ ಕೆಲಸಗಳಲ್ಲಿ ತೊಡಗಿದ್ದಂಥ ಸಬ್ಜೆಕ್ಟುಗಳೆಲ್ಲಾ ಪಾಸಾಗಲಿಲ್ಲ. ನಾನ್ ಕಾಂಗ್ರೆಸ್ಸಿನವರು ಮೇಯರ್ ಆಗಿದ್ದಾಗ ಸಬ್ಜೆಕ್ಟ್‌ಗಳೆಲ್ಲಾ ಪೂರ್ಣವಾಗಿ ಇತ್ಯರ್ಥವಾಗುತ್ತಿದ್ದವು. ಅದಕ್ಕೆ ಕಾರಣ ಅವು ಜನಗಳ ಹಿತಕ್ಕೆ ಸಂಬಂಧಪಟ್ಟವುಗಳಾಗಿರುತ್ತಿದ್ದವು. ಆದ್ದರಿಂದ 500 ಸಬ್ಜೆಕ್ಟುಗಳು ಉಳಿದಿರತಕ್ಕಂಥಾದ್ದು ಕಾಂಗ್ರೆಸ್ ಮೇಯರ ಕಾಲಕ್ಕೆ ಸಂಬಂಧಪಟ್ಟವುಗಳು. ನಾನ್ ಕಾಂಗ್ರೆಸ್ ಮೇಯರ್ ಇದ್ದ ಕಾಲದಲ್ಲಿ ನಗರ ಸಭೆಯಲ್ಲಿ ತಂದಂಥ ಸಬ್ಜೆಕ್ಟುಗಳೆಲ್ಲಾ ಪಾಸಾಗುತ್ತಿದ್ದವು.

ಇನ್ನು ಎರಡನೆಯ ದ್ರೋಹ ಎಂದರೆ, ಬೆಂಗಳೂರಿನ ನಾಗರಿಕರಿಗೆ ಉಚಿತ ನೀರಿನ ಸೌಲಭ್ಯ ಒದಗಿಸುವುದಕ್ಕೆ ಸಂಬಂಧಪಟ್ಟ ಹಾಗೆ ಒತ್ತಾಯ ಮಾಡಿದ್ದು. ಈ ವಿಷಯದಲ್ಲಿ ಮೊದಲು ನೀರಿನ ರೇಟನ್ನು ಗೊತ್ತು ಮಾಡಬೇಕಾದರೆ ಕನ್‌ಸೂಂ ಆಗಿರತಕ್ಕ ನೀರಿಗೆ ವಾಟರ್ ಸಪ್ಲೈ ಬೋರ್ಡಿನ ರೇಟನ್ನು ತೆಗೆದುಕೊಂಡು ಅದರಲ್ಲಿ ರಿಬೇಟ್ ತೆಗೆಯುತ್ತಿದ್ದರು. ಅದನ್ನು ಬದಲಾಯಿಸಿ ಕನ್‌ಸೂಂ ಆಗಿರತಕ್ಕ ನೀರಿನಲ್ಲಿ ಫ್ರೀ ಅಲೋಯನ್ಸ್ ಕಳೆದು ರೇಟನ್ನು ಕಂಡುಹಿಡಿದು ಜನಗಳಿಗೆ ಅನುಕೂಲವಾಗುವ ಹಾಗೆ ರೆಸೊಲ್ಯೂಷನ್ ಮಾಡಿದ ದೊಡ್ಡ ಅಪರಾಧಕ್ಕೆ ಷೋಕಾಸ್ ನೋಟೀಸ್ ಕೊಟ್ಟು ಅದನ್ನ ಎತ್ತಿ ಹಿಡಿದು ಕಾರ್ಪೊರೇಷನ್ ಅನ್ನು ಸೂಪರ್‌ಸೀಡ್ ಮಾಡಿದ್ದಾರೆ.

10-00 A.M.

ನೀವು ಮಾಡಿರುವ ನಿರ್ಣಯ ಸರಿಯಾಗಿಲ್ಲವೆಂದು ಹೇಳಿದರು. ಜನರಿಂದ ಸಾವಿರಾರು ರೂಪಾಯಿಗಳವರೆಗೆ ನೀರಿನ ತೆರಿಗೆ ಬರಬೇಕಾಗಿತ್ತು. ಸರಿಯಾಗಿ ವಸೂಲು ಮಾಡಲಿಲ್ಲವೆಂದು ಕಾರಣ ಕೊಟ್ಟು ಕಾರ್ಪೊರೇಷನ್ ಸೂಪರ್‌ಸೀಡ್ ಮಾಡಿದರು. ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸನ್ನು ಪಾಸ್ ಮಾಡಿ ಜಾರಿಗೆ ತರಲಿಲ್ಲವೆನ್ನುವ ಒಂದು ಕಾರಣವನ್ನು ಕೊಟ್ಟು ಕಾರ್ಪೊರೇಷನ್ ಸೂಪರ್‌ಸೀಡ್ ಮಾಡಿದರು. ನಾವು 10—12 ಮೀಟಿಂಗ್‌ಗಳನ್ನು ಮಾಡಿ, ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ಬಗ್ಗೆ ಅನೇಕ ದಿನಗಳು ಚರ್ಚೆ ಮಾಡಿ, ಅದನ್ನು ಪಾಸ್ ಮಾಡುವ ಮಟ್ಟಕ್ಕೆ ತಂದಿರಿಸಿದ್ದೆವು. ಅದೇ ಸಮಯಕ್ಕೆ ಸರಿಯಾಗಿ ಕಾರ್ಪೊರೇಷನನ್ನು ಸೂಪರ್‌ಸೀಡ್ ಮಾಡಿ ಅಡ್ಮಿನಿಸ್ಟ್ರೇಟರ್ ಅವರನ್ನು ನೇಮಕ ಮಾಡಿದರು. ನೇಮಕ ಮಾಡಿ ಒಂದು ವರ್ಷವಾಯಿತು, ಇದುವರೆಗೆ ಏತಕ್ಕೆ ಕೇಡರ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಜಾರಿಗೆ ತರಲಿಲ್ಲವೆಂದು ಕೇಳುತ್ತೇನೆ. ಅಡ್ಮಿನಿಸ್ಟ್ರೇಟರ್ ಎಂದರೆ ಸರ್ವಾಧಿಕಾರತ್ವ ಪಡೆದವರು. ಎಲ್ಲಾ ಅಧಿಕಾರವೂ ಅವರಲ್ಲಿಯೇ ಇರುವಾಗ ಏತಕ್ಕೆ ಮಾಡಲಿಲ್ಲ. ಕಾರ್ಪೊರೇಷನ್ ಸೂಪರ್‌ಸೀಡ್‌ಮಾಡಲು ಮೂರು ಕಾರಣಗಳನ್ನು ಕೊಟ್ಟರು. ಒಂದು, ಸಬ್ಜೆಕ್ಟ್‌ಗಳು ಪಾಸ್ ಆಗಲಿಲ್ಲವೆಂದು, ಇದಕ್ಕೆ ಕಾರಣ ಕಾಂಗ್ರೆಸ್ ಕಾರ್ಪೊರೇಟರ್‌ಗಳೇ. ಎರಡನೆಯದು ಜನರಿಂದ ನೀರಿನ ತೆರಿಗೆಯನ್ನು ಸರಿಯಾಗಿ ವಸೂಲು ಮಾಡಲಿಲ್ಲವೆಂದು. ಮೊದಲಿನಿಂದಲೂ ಇದ್ದ ಉಚಿತ ನೀರಿನ ಸರಬರಾಜನ್ನು ತೆಗೆದುಹಾಕಿದರು. ವಿಶ್ವ ಬ್ಯಾಂಕ್‌ನಿಂದ ಸಾಲ ತಂದು ಕಾವೇರಿ ನೀರನ್ನು ಬೆಂಗಳೂರಿಗೆ ತರುತ್ತೇವೆಂದು ಹೇಳಿದರು, ಅದನ್ನು ಸಹ ಇವರು ಮಾಡಿಲ್ಲ. ಬೆಂಗಳೂರಿನ ನಾಗರಿಕರಿಗೆ ಅನುಕೂಲವಾಗುವ ಕೆಲವು ನಿರ್ಣಯಗಳನ್ನು ಮಾಡಿ ಸರ್ಕಾರಕ್ಕೆ ಕಳಿಸಿದರೆ ಅವುಗಳು ಇವರಿಗೆ ಒಪ್ಪಿಗೆಯಾಗಲಿಲ್ಲ. ಕಾರ್ಪೊರೇಷನ್ ರದ್ದು ಮಾಡುವುದಕ್ಕೆ ಸರ್ಕಾರದವರು ಕೊಟ್ಟಿರುವ ಕಾರಣಗಳಲ್ಲಿ ಕೆಲವನ್ನು ಹೈಕೋರ್ಟಿನವರು ತಳ್ಳಿ ಹಾಕಿದರು. ಕಾರ್ಪೊರೇಷನ್ ರದ್ದು ಮಾಡುವುದಕ್ಕೆ ಇಂತಹ ಸಣ್ಣ ಸಣ್ಣ ಕಾರಣಗಳನ್ನು ಕೊಡುವುದೇ ಎಂದು ಹೈಕೋರ್ಟಿನ ಜಡ್ಜ್‌ಗಳೇ ಹೇಳಿದರು. 1970ರ ವರೆಗೂ ಇವರು ಕಾರ್ಪೊರೇಷನ್ ಸೂಪರ್‌ಸೀಡ್ ಮಾಡಲು ಕಾರಣವೇನು ಎಂದು ಕೇಳುತ್ತೇನೆ. ಕಾರ್ಪೊರೇಷನ್ ರದ್ದು ಮಾಡುವುದಕ್ಕೆ ಯಾವ ಪಕ್ಷಕ್ಕೂ ಮೆಜಾರಿಟಿ ಇಲ್ಲವೆಂದು ಹೇಳಿದ್ದರೆ ಒಪ್ಪಬಹುದಾಗಿತ್ತು, ಅದು ಬಿಟ್ಟು ಇಲ್ಲಸಲ್ಲದ ಕಾರಣಗಳನ್ನು ಕೊಟ್ಟು 1970ರ ವರೆಗೆ ರದ್ದು ಮಾಡಿದ್ದಾರೆ. ಆ ರೀತಿ ಮಾಡಿರುವುದು ಸಮಂಜಸವಾಗಿ ಕಾಣುವುದಿಲ್ಲ. ಈ ಅಡ್ಮಿನಿಸ್ಟ್ರೇಟರ ಆಡಳಿತ ವಹಿಸಿಕೊಂಡಮೇಲೆ ಮೊದಲಿಗಿಂತ ಆಡಳಿತ ಚೆನ್ನಾಗಿ ನಡೆಯುತ್ತಿದೆಯೆಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಇವತ್ತಿನ ದಿವಸ

ಬೆಂಗಳೂರಿನ ನಾಗರೀಕರಿಗೆ ಸೊಳ್ಳೆ ಕಾಟ ತಪ್ಪಲಿಲ್ಲ. ಸ್ಲಮ್ ಏರಿಯಾ ಕ್ಲಿಯರ್ ಆಗಲಿಲ್ಲ ನೀರಿನ ಸಮಸ್ಯೆ ಬಗೆಹರಿಯಲಿಲ್ಲ. ಸೂಯೇಜ್ ಡಿಸ್‌ಪೋಸ್ ಮಾಡುವುದಾಗಿಲ್ಲ. ಮಲ್ಟಿಸ್ಟೋರೀಡ್ ಬಿಲ್ಡಿಂಗ್ ಕಟ್ಟಿ ಇಷ್ಟು ವರ್ಷವಾದರೂ ಸಹ ಅದನ್ನು ಉಪಯೋಗಿಸುತ್ತಿಲ್ಲ. ಜಯನಗರದಲ್ಲಿ ಒಂದು ಮಾರ್ಕೆಟ್ ಕಟ್ಟಿ 5 ವರ್ಷವಾದರೂ ಸಹ ಅದು ಖಾಲಿಯಾಗಿಯೇ ಇದೆ. ಜನಗಳಿಗೆ ಅನುಕೂಲ ವಾಗುವ ಯಾವ ಒಂದು ಕೆಲಸವನ್ನೂ ಇವರು ಮಾಡಿಲ್ಲ. ಹಿಂದೆ ನಾವು ಶ್ರಮಪಟ್ಟು ಪ್ರತಿಯೊಂದು ಡಿವಿಜನ್‌ಗೂ ಅನುಕೂಲವಾಗುವಂತಹ ಒಂದು ಪ್ರೋಗ್ರಾಮನ್ನು ತಯಾರು ಮಾಡಿದ್ದೆವು. ಅಡ್ಮಿನಿಸ್ಟ್ರೇಟರ್ ಆಡಳಿತ ಜಾರಿಗೆ ಬಂದಮೇಲೆ, ನಾವು ತಯಾರುಮಾಡಿದ ಪ್ರೋಗ್ರಾಮನ್ನು ಜಾರಿಗೆ ತರಬಾರದೆಂದು ಸಂಬಂಧಪಟ್ಟ ಆಫೀಸರ್‌ಗಳಿಗೆ ಮೇಲಿನವರು ಹೇಳಿರಬಹುದು. ಕಾರ್ಪೊರೇಷನ್ ಸೂಪರ್‌ಸೀಡ್ ಆಗುವುದಕ್ಕೆ ಮುಂಚೆ ಒಂದು ಕೋಟಿ ರೂಪಾಯಿ (Cash Balance) ಕ್ಯಾಷ್ ಬ್ಯಾಲೆನ್ಸ್ ಇತ್ತು. ತಮಗೆ ಬೇಕಾಗುವ ಕಂಟ್ರಾಕ್ಟರ್‌ಗಳಿಗೆ, ಇಂಜನಿಯರ್‌ಗಳಿಗೆ ಅನುಕೂಲವಾಗಲಿ ಎಂದು ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ರಸ್ತೆ ರಿಪೇರಿ, ಚರಂಡಿ ಕೆಲಸಗಳನ್ನು ಮಾಡಿಸುತ್ತಿದ್ದಾರೆ.

Mr. DEPUTY SPEAKER.—The House will now rise for tea and meet after half-an-hour.

The House rose at Five Minutes past Ten of the Clock and re-assembled at Thirty-five Minutes past Ten of the Clock.

[MR. SPEAKER in the Chair]

Mr. SPEAKER.—I hope all members are aware that only half-an-hour was allotted for this. If that time is over, there will be no vote on the Resolution. I leave it to members.

ಶ್ರೀ ಟಿ. ಆರ್. ಶಾಮಣ್ಣ.—ಸ್ವಾಮಿ, ಅಡ್ಮಿನಿಸ್ಟ್ರೇಟರ್ ಅವರ ಆಳ್ವಿಕೆಯಲ್ಲಿ ಬೆಂಗಳೂರು ನಾಗರೀಕರಿಗೆ ಆಗುತ್ತಿರುವ ಅನುಕೂಲ ಮತ್ತು ಅನಾನುಕೂಲಗಳ ಬಗ್ಗೆ ಮಾತನಾಡುತ್ತಿದ್ದೆ. ನಮ್ಮ ಮಾನ್ಯ ಮಂತ್ರಿಗಳು ಅನೇಕ ಸಾರಿ ಈಗಿನ ಆಡಳಿತದಲ್ಲಿ ಚೆನ್ನಾಗಿ ಕೆಲಸಗಳು ನಡೆಯುತ್ತಿವೆ, ರೆವಿನ್ಯೂ ಚೆನ್ನಾಗಿ ವಸೂಲಾಗುತ್ತಿದೆ, ಆಕ್ಟ್ರಾಯಿ 10ರಿಂದ 15 ಲಕ್ಷದವರೆಗೆ ಹೆಚ್ಚಾಗಿ ವಸೂಲಾಗಿದೆ ಯೆಂದು ಹೇಳಿದರು. ಬೆಲೆಗಳ ಧಾರಣೆ ಹೆಚ್ಚಿರುವುದರಿಂದ, ರೂಪಾಯಿಯ ಅಪಮೌಲ್ಯವಾಗಿರುವು ದರಿಂದ ಆಕ್ಟ್ರಾಯ್ ರೆವಿನ್ಯೂ ಹೆಚ್ಚಾಗಿದೆಯೇ ಹೊರತು, ಅದರಲ್ಲಿ ಹೇಳಿಕೊಳ್ಳುವುದು ಏನೂ ಇಲ್ಲ. ಈಗ ಒಂದೂವರೆ ಕೋಟಿ ರೂಪಾಯಿಗಳವರೆಗೆ ಆಕ್ಟ್ರಾಯ್ ವರಮಾನ ಬರುತ್ತಿರುವುದಕ್ಕೆ ಬೆಲೆಗಳು ಜಾಸ್ತಿಯಾಗಿರುವುದೇ ಕಾರಣ. ಮನೆಗಂದಾಯವನ್ನು ಯದ್ವಾತದ್ವಾ, ಒಂದಕ್ಕೆ ಎರಡರಷ್ಟು, ಮೂರರಷ್ಟು ಹೆಚ್ಚಿಸಿ ಕಳಿಸಿದ್ದಾರೆ. ಆ ಬಗ್ಗೆ ಜನರಿಂದ ಸುಮಾರು 20 ಸಾವಿರ ಅಪೀಲ್‌ಗಳು ಬಂದಿವೆ. ಸಿಕ್ಕಾಪಟ್ಟೇ ಹೆಚ್ಚಿಸಿ ಮನೆ ಕಂದಾಯದಿಂದ ಸುಮಾರು 30 ಲಕ್ಷ ರೂಪಾಯಿಗಳು ಹೆಚ್ಚು ಬಂದಿದೆಯೆಂದು ಹೇಳಿಕೊಳ್ಳುತ್ತಿದ್ದಾರೆ. ಸರ್ಕಾರಿ ಕಟ್ಟಡಗಳ ಮೇಲೆ ಕಂದಾಯವನ್ನು ವಸೂಲು ಮಾಡಬೇಕೆಂದು ಎರಡು ವರ್ಷಗಳ ಹಿಂದೆ ಕಾಯಿದೆಯಾಯಿತು. ಇದುವರೆಗೆ ಯಾವ ಹಣವನ್ನು ಸರ್ಕಾರದಿಂದ ವಸೂಲು ಮಾಡಿಲ್ಲ. ಅಡ್ವರ್‌ಟೈಸ್‌ಮೆಂಟ್ ಟ್ಯಾಕ್ಸನ್ನು ಇದುವರೆಗೆ ಏತಕ್ಕೆ ವಸೂಲು ಮಾಡಿಲ್ಲವೆಂದು ಕೇಳುತ್ತೇನೆ. ಕಾರ್ಪೊರೇಷನ್ ಸೂಪರ್‌ಸೀಡ್ ಆದಮೇಲೆ ತಮ್ಮ ಕಡೆಯ ಇಂಜನಿಯರ್‌ಗಳು ಮತ್ತು ಕಂಟ್ರಾಕ್ಟರ್‌ಗಳಿಗೆ ಅನುಕೂಲವಾಗಲೆಂದು ಜನರ ಕಣ್ಣಿಗೆ ಕಾಣುವ ರಸ್ತೆಗಳ ರಿಪೇರಿ ಮಾಡಿಸಿ, ರಸ್ತೆಗಳನ್ನು ದೊಡ್ಡದು ಮಾಡಿಸುತ್ತಿದ್ದಾರೆ. ಹಿಂದುಳಿದ ಸುಮಾರು 34 ಹಳ್ಳಿಗಳು ಮುಂದುವರೆಯದೆ ಅದೇ ರೀತಿ ಇವೆ. ಬಡವರು ವಾಸಮಾಡುವ ಜಾಗಗಳನ್ನು ಯಾರೂ ಕೇಳುವವರೇ ಇಲ್ಲವಾಗಿದೆ. ಮೊದಲು ಕಾರ್ಪೊರೇಟರ್‌ಗಳು ಎಲ್ಲಾ ಡಿವಿಜನ್‌ಗಳನ್ನೂ ಸರಿಯಾಗಿ ನೋಡಿಕೊಳ್ಳುತ್ತಿದ್ದರು. ಪ್ರಜೆಗಳಿಗೆ ಅನುಕೂಲವಾಗುವ ಯಾವ ಒಂದು ಕೆಲಸವನ್ನೂ ಸಹ ಈಗಿನ ಅಡ್ಮಿನಿಸ್ಟ್ರೇಟರ್ ಆಡಳಿತದಲ್ಲಿ ಮಾಡಿಸಿಲ್ಲ, ಮೇಯೋ ಹಾಲಿನಲ್ಲಿ ಕಾರ್ಪೊರೇಟರ್‌ಗಳು ಕೂಗಾಟ ಮಾಡುತ್ತಿದ್ದರು ಎನ್ನುವುದು ಮಂತ್ರಿಗಳ ಗಮನಕ್ಕೆ ಬರುತ್ತಿತ್ತೇ

(ಶ್ರೀ ಟಿ. ಆರ್. ಶಾಮಣ್ಣ)

ದಿನಾ ಏತಕ್ಕಾಗಿ ಕೂಗಾಟ ಮಾಡುತ್ತಿದ್ದರು ಎನ್ನುವುದು ಅವರಿಗೆ ಗೊತ್ತಾಗುತ್ತಿರಲಿಲ್ಲ. ಎಲ್ಲಾ ಡಿವಿಜನ್‌ಗಳಲ್ಲೂ ಒಬ್ಬೊಬ್ಬ ಕಾರ್ಪೊರೇಟರ್‌ಗಳು ಇದ್ದರೆ, ಆ ಭಾಗಕ್ಕೆ ಬೇಕಾಗುವ ನೀರಿನ ಸೌಕರ್ಯ, ದೀಪದ ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ, ರಸ್ತೆಗಳ ರಿಪೇರಿ ಕೆಲಸವನ್ನು ಸರಿಯಾಗಿ ಮಾಡಿಸುತ್ತಿದ್ದರು. ಯಾರಿಗಾದರೂ ಅನಾರೋಗ್ಯವಾದರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬಿಡುತ್ತಿದ್ದರು. ಮಕ್ಕಳಿಗೆ ಸ್ಕೂಲ್‌ಗಳಲ್ಲಿ ಸೀಟ್ ಕೊಡಿಸಲು ನೆರವಾಗುತ್ತಿದ್ದರು. ಆಯಾ ಭಾಗಗಳಲ್ಲಿ ಸಣ್ಣಪುಟ್ಟ ಜಗಳಗಳು ಆದರೆ ಪರಿಹಾರ ಮಾಡುತ್ತಿದ್ದರು. ಇಷ್ಟೆಲ್ಲಾ ಕೆಲಸಗಳನ್ನೂ ಒಬ್ಬ ಅಡ್ಮಿನಿಸ್ಟ್ರೇಟರ್ ಮಾಡುವುದಕ್ಕಾಗುವುದಿಲ್ಲ. ಮೊದಲು ಇದ್ದ 63 ಜನ ಕಾರ್ಪೊರೇಟರ್‌ಗಳು 63 ಡಿವಿಜನ್‌ಗಳ ಕಣ್ಣಾಗಿದ್ದರು. ಎಲೆಕ್ಟೆಡ್ ಬಾಡೀಸ್ ಇದ್ದಾಗ ಕೆಲವೊಂದು ತಪ್ಪುಗಳು ಆದರೆ ಅದನ್ನು ಸರ್ಕಾರದವರು ತಿದ್ದುವುದಕ್ಕೆ ಪ್ರಯತ್ನ ಮಾಡಬೇಕಾಗಿತ್ತು. ಅದು ಬಿಟ್ಟು ಸೂಪರ್‌ಸೀಡ್ ಮಾಡಿದ್ದು ದ್ರೋಹ ಬಗೆದಂತಾಗಿದೆ, ಈ ಪ್ರಜಾಪ್ರಭುತ್ವವನ್ನು ಕೊಲೆ ಮಾಡಿದಂತಾಗಿದೆ. ಈ ರೀತಿ ಮಾಡಿದ್ದು ಸರಿಯಾದುದು ಅಲ್ಲವೆಂದು ಹೇಳುತ್ತೇನೆ. ಬೆಂಗಳೂರಿನ ನಾಗರೀಕರು ಎಲ್ಲಾ ವಿಚಾರಗಳಲ್ಲೂ ತೃಪ್ತಿಯಿಂದ ಇದ್ದಾರೆಯೋ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಬೇಕಾದರೆ ತಮ್ಮ ಕಾಂಗ್ರೆಸ್ ಎಲೆಕ್ಟೆಡ್ ಪ್ರತಿನಿಧಿಗಳನ್ನು ಗುಟ್ಟಾಗಿ ಕರೆಸಿಕೊಂಡು ಕೇಳಿಕೊಳ್ಳಲಿ, ಆಗ ಅವರಿಗೆ ಸಮರ್ಪಕವಾದ ಉತ್ತರ ಸಿಗುತ್ತದೆ. ಈ ವಿಚಾರದಲ್ಲಿ ನಾವು ಎಷ್ಟು ಹೇಳಿದರೂ ಸಹ ಮಾನ್ಯ ಮಂತ್ರಿಗಳ ಕಲ್ಲೆದೆ ಕರಗುವುದಿಲ್ಲ. ನಾನು ಕೇಳತಕ್ಕಂಥದ್ದು ಇಷ್ಟೆ, ಚುನಾವಣೆ ಇದೇ ಡಿಸೆಂಬರ್‌ನಲ್ಲಿ ಆಗಬೇಕಾಗಿತ್ತು, ಆದರೆ ತಕ್ಷಣ ಮಾಡುವುದಕ್ಕಾಗುವುದಿಲ್ಲ, ಇನ್ನು ಎರಡು ಮೂರು ತಿಂಗಳು ಬಿಟ್ಟಾದರೂ ಚುನಾವಣೆ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ತಂದಿರುವ ನಿರ್ಣಯದ ಉದ್ದೇಶವೇ ಇದು. ಅನೇಕ ಕಾರಣಗಳನ್ನು ಹೇಳಿಕೊಂಡು ಸ್ಥಳೀಯ ಪಂಚಾಯತ್ ಚುನಾವಣೆಗಳನ್ನು ಸಹ ಮುಂದಕ್ಕೆ ಹಾಕಿಕೊಂಡು ಬಂದಿರಿ. ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ ಚುನಾವಣೆ ನಡೆದು 8 ವರ್ಷವಾಯಿತು. ಜನರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಸ್ಥಳೀಯ ಪಂಚಾಯತ್ ಚುನಾವಣೆ ನಡೆಸುವುದಕ್ಕೆ ತೀರ್ಮಾನ ತೆಗೆದುಕೊಂಡಂತೆ, ಈ ಕಾರ್ಪೊರೇಷನ್ ಚುನಾವಣೆಯನ್ನು ಸಹ ನಡೆಸುವುದಕ್ಕೆ ಏರ್ಪಾಡು ಮಾಡಬೇಕು. ಬೆಂಗಳೂರಿನಲ್ಲಿ ಚುನಾವಣೆ ನಡೆಸಿಬಿಟ್ಟರೆ ಚೈನಾ ಮತ್ತು ಪಾಕಿಸ್ತಾನದವರೇನು ನಿಮ್ಮ ಮೇಲೆ ದಾಳಿ ಮಾಡುವುದಕ್ಕೆ ಬರುವುದಿಲ್ಲ. ಚುನಾವಣೆಯನ್ನು ನಡಸಿದರೆ ಜನರು ಯೋಗ್ಯರಾದವರನ್ನು ಆರಿಸುತ್ತಾರೆ. ಚುನಾಯಿತ ಪ್ರತಿನಿಧಿಗಳು ಬಂದರೆ ಬೆಂಗಳೂರಿನ ನಾಗರೀಕರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸುವುದಕ್ಕೆ ಅನುಕೂಲವಾಗುತ್ತದೆ. ಪ್ರಜಾಪ್ರಭುತ್ವದ ದೃಷ್ಟಿಯಿಂದಲಾದರೂ ಸಹ ಚುನಾವಣೆಯನ್ನು ನಡೆಸಿ, ನಾನು ತಂದಿರುವ ನಿರ್ಣಯದ ಉದ್ದೇಶವೇ ಅದು. ಆದ್ದರಿಂದ ಮಾನ್ಯ ಮಂತ್ರಿಗಳು ತಮ್ಮ ಈಗಿನ ನಿರ್ಧಾರವನ್ನು ಬದಲಾಯಿಸಬೇಕು. ನಾನು ತಂದಿರುವ ನಿರ್ಣಯವನ್ನು ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವ ಪ್ರತಿಯೊಬ್ಬರೂ ಸಹ ಒಪ್ಪಿಕೊಳ್ಳಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—Sri S. S. Shettar, has given notice of an amendment saying "after the words Bangalore, add the words, Hubli and Dharwar". Considering the matter and the scope of the debate, will it be in order? The scope of the debate should not be stretched by an amendment. It is as good as a second resolution being brought in without putting it to ballot.

Sri S. S. SHETTAR (Hubli).—I may be given an opportunity to explain how this amendment will fit in and not necessitate bringing in another resolution. My submission is that the circumstances that prevail in Bangalore as well as in Hubli-Dharwar are similar.

Mr. SPEAKER.—Why not bring in a separate Resolution?

Sri S. S. SHETTAR.—It does not become a separate resolution because the circumstances are the same. In this resolution both the cases can be disposed of. These two twin cities corporation was superseded when they were municipalities.

Mr. SPEAKER.—Were they done under the same order.

Sri S. S. SHETTAR.—The scope of this resolution does not discuss any order of the Mysore Government. It requests that elections shall have to be held as early as necessary. That is my humble suggestion, if at all election is held. The same request is made so far as Hubli and Dharwar are concerned. The hon'ble member Sri T. R. Shamanna was good enough to make observations about Hubli.

Mr. SPEAKER.—It all depends on the House. I will be influenced to a large extent by the opinion of the House.

ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಈ ಒಂದು ಠರಾವು ಮೂಲಕ ಬೆಂಗಳೂರು ಕಾರ್ಪೊರೇಷನ್ನಿಗೆ ಏನು ಆಗಬೇಕಾಗಿದೆಯೋ ಅದು ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ನಿಗೂ ಅನ್ವಯಿಸುತ್ತದೆ. ಬೆಂಗಳೂರು ಕಾರ್ಪೊರೇಷನ್ನಿಗೆ ಚುನಾವಣೆಯಾದರೆ ಅದೇ ರೀತಿ ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ನಿಗೂ ಅದು ಅನ್ವಯಿಸುತ್ತದೆ.

†**Sri S. S. SHETTAR.**—I submit that the twin cities of Hubli-Dharwar were superseded when they were municipalities in the year 1959. Thereafter no elections were held. Hubli and Dharwar were incorporated into and corporation in 1962 but so far no elections are held. Elections were to be held on 10th October 1965, but unfortunately what happened was at that time emergency was proclaimed and the elections were postponed. Fortunately a Bill has been introduced repealing that Postponement of Elections Act. When a resolution has been brought compelling the Government of Mysore to hold elections for the Corporation of Bangalore, we apprehend that the Government of Mysore may not take earlier steps though that particular Act is repealed to hold elections to the Hubli corporation, because a new body will have to take charge before 20th February of each year. The budget will have to be passed after 20th February; the financial year will commence from 21st February of each year. My difficulty is that if elections are to be held, voters list will have to be prepared, the respective wards will have to be declared and so many election preparations will have to be made.

My apprehension is, though the postponement of elections Act is reqealed by this House, the Government may again delay it for one more year. The Hubli-Dharwar people are highly frustrated to see that their civil interests are not at all protected by the nominated body. The Government have failed to taken particular care in bringing about voters list and making earlier prepartions for the conduct of elections-that is our one genuine hope—It is necessary to bring to the notice of this House as well as the people of Mysore that the Government of Mysore has highly neglected to conduct these elections. Therefore my submission is that after the word "Bangalore" if the words "Hubli and Dharwar" are added, both the purposes would be served. Sri T. R. Shamanna is willing to accept this small amendment. My submission is, when he has agreed it may be allowed.

Mr. SPEAKER.—Supersession of the Bangalore Corporation is under a definite Act. I do not think Hubli Dharwar is governed by that

(MR. SPEAKER)

Act. The effects of the Amendment may be good but both differ. In ths case of Hubli-Dharwar corporation: the statue which constituted it is different. So far as Bangalore corporation is concerned, there is no legal bar. I do not know what that repealing Act. That the hon'ble member referred to and I have not applied my mind. Hence I do not think the two are similar. It is just like two adoptions in two different families. No doubt, adoption is a common word but the scope of the debate is not the same. If the hon'ble Member wants to participate in this resolution incidentally referring to this matter, I will allow. After all, it is only a certain debate to enlighten public opinion. Looking to the way in which this resolution is having its career in this House, there may not be a chance of its being voted upon. Yesterday, there has been a full debate on this aspect and I feel that the House has expressed its opinion. Still if the members want to participate in it, why should I stand in their why? I do not think I should allow this amendment and try to complicate matters still further. I would allow Sri Shettar to participate in the debate. Does the hon'ble Member Sri Shamanna want to accept his amendment?

Sri T. R. SHAMANNA.—I have no objection; we are as much interested in the people of Hubli-Dharwar Corporation getting their elected body as we are in the people of Bangalore City Corporation. I will be happy if that subject is also considered along with this.

†Sri R. M. PATIL (Minister for Municipal Administration).—Sir, this subject which Sri Shettar is proposing is an entirely different matter. The Hubli Corporation is governed by the Bombay Provincial Corporation Act and the elections to that body are to be facilitated by adopting a Bill which has been introduced yesterdy. The subject which Mr. Shettar has brought forward by way of a resolution is entirely different because this order of supresession is in respect of the Bangalore City Corporation and that too under the Bangalore Municipal Corporation Act. This matter is before the High Court under a writ petition which Sri Shamanna has recently filed along with others.

ಶ್ರೀ ಟಿ. ಆರ್. ಶಾಮಣ್ಣ.—ನಿನ್ನೆಯ ದಿವಸ ಪ್ರಶ್ನೆಯನ್ನು ಅವರು ಎತ್ತಲಿಲ್ಲ. ಈ ದಿನ ಎತ್ತುತ್ತಿದ್ದಾರೆ.

ಅಧ್ಯಕ್ಷರು.—ನಿನ್ನೆಯ ದಿವಸ ವಿಧೇಯಕ ಸಭೆಯ ಮುಂದೆ ಇತ್ತು. ಅದರ ಬಗ್ಗೆ ಸಬಬು ದಿನ ಎಂದು ಹೇಳುವುದಕ್ಕಾಗುವುದಿಲ್ಲ. ಇವತ್ತು ಸಭೆಯ ಮುಂದೆ ಇರುವುದು ನಿರ್ಣಯಗಳು. Still I am not satisfied that *sub judice* applies here because I do not think this request to Government to hold elections is going to be ever discussed by the High Court. Simply because there is a matter pending before the High Court does not necessarily attract anything and everything connected with that.

Sri S. S. SHETTAR.—The writ petition is not in respect of holding elections.

Mr. SPEAKER.—There is a legal bar. Even the Government cannot consider the question of holding the elections or ordering anything immediately. The House will have to pass that Bill which has been brought for repealing.

S. S. SHETTAR.—The Bill has already been introduced in this House.

Mr. SPEAKER.—Introduction is not passing. After passing of a Bill the assent is necessary and thereafter it be placed on the Statute Book. So, I do not think I am going to accept the amendment.

ಶ್ರೀ ಎಚ್. ಎನ್. ನಂಜೇಗೌಡ.—(ಅರಕಲಗೂಡು) ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಅಲಾಟ್ ಆಗಿರುವ ಪ್ರಕಾರ ಕಾಲಮಿತಿಯನ್ನು ಗಣನೆಗೆ ತೆಗೆದುಕೊಳ್ಳದೆ ಹೋದರೆ ಬೇರೆ ನಿರ್ಣಯಗಳನ್ನು ಚರ್ಚೆಗೆ ತೆಗೆದುಕೊಳ್ಳಲು ಅವಕಾಶವಾಗುವುದಿಲ್ಲ. ಅದೂ ಅಲ್ಲದೆ ಈ ವಿಷಯವಾಗಿ ನಿನ್ನೆ ಎಲ್ಲಾ ಚರ್ಚೆಯಾಗಿದೆ......

Mr. SPEAKER.—He has sent two requests, one to the Deputy Speaker and another to me saying that I should not extend the time so that other resolutions may be reached. I have passed an endoresement on that. So far as I am concerned, I will try to adhere to it, but the matter rests with the House. The hon'ble Member Sri Shettar may participate in the debate.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರ).—ಮಾನ್ಯ ಸಭಾಪತಿಗಳೇ, ಬೆಂಗಳೂರು ನಗರ ಕಾರ್ಪೊರೇಷನ್ ಅನ್ನು ರದ್ದು ಮಾಡಿರುವ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆ ನಿನ್ನೆ ದಿವಸ ಆಗಿದೆ. ನಾನು ಪುನಃ ಅದನ್ನೇ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ವಿಷಯ, ನಿನ್ನೆಯ ದಿವಸ ನಾವೆಲ್ಲಾ ಏನು ಅಭಿಪ್ರಾಯ ಪಟ್ಟೆವೋ ಅದೇ ರೀತಿಯ ಅಭಿಪ್ರಾಯವನ್ನು ಮಾನ್ಯ ಮಂತ್ರಿಗಳೂ ಪಟ್ಟರು ಎಂದು ನನಗನ್ನಿಸುತ್ತದೆ. "ಮರ್ಡರ್ ಆಫ್ ಡೆಮಾಕ್ರಸಿ" ಎಂದು ಹೇಳಿ ಅನಂತರ "ಮ್ಯಾಸಕರ ಆಫ್ ಡೆಮಾಕ್ರಿಸಿ" ಎಂದು ಹೇಳಿ ಅವರೇ ಒಪ್ಪಿಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಬೆಂಗಳೂರು ಕಾರ್ಪೊರೇಷನ್ ಸೂಪರ್‌ಸೀಡ್ ಮಾಡಿ ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧವಾಗಿ ಸರ್ಕಾರ ನಡೆದುಕೊಂಡಿದೆ ಎಂದು ನಾನು ಮೊದಲು ಹೇಳಬೇಕಾಗಿದೆ.

ಒಂದು ಮುಖ್ಯವಾದ ಪ್ರಶ್ನೆ ಏನೆಂದರೆ, ಕಾರ್ಪೊರೇಟರುಗಳು ಕೆಲವು ತಪ್ಪುಗಳನ್ನು ಮಾಡಿರಬಹುದು. ಅಂಥ ಸಂದರ್ಭದಲ್ಲಿ ಸರ್ಕಾರದ ಧೋರಣೆ ಏನಿರಬೇಕು ಎನ್ನುವುದು ಮುಖ್ಯವಾದ ಪ್ರಶ್ನೆ. ನಾನು ತಿಳಿದುಕೊಂಡಿರುವಂತೆ ಮಂತ್ರಿಗಳ ಧೋರಣೆ ಆದಷ್ಟುಮಟ್ಟಿಗೆ ಇದನ್ನು ಸುಲಭ ರೀತಿಯಲ್ಲಿ ಪರಿಹರಿಸುವಂತೆ ಇರಬೇಕು. ಕಾರ್ಪೊರೇಟರುಗಳು, ಮುನಿಸಿಪಲ್ ಕೌನ್ಸಿಲ್ಲರುಗಳು ಸ್ವಲ್ಪಮಟ್ಟಿಗೆ ತಪ್ಪುಗಳನ್ನು ಮಾಡಬಹುದು. ಪ್ರಜಾಪ್ರಭುತ್ವದಲ್ಲಿ ಇದು ನಡೆಯುವುದಾಗಿದೆ. ಅದಕ್ಕಾಗಿ ಸಂಬಂಧಪಟ್ಟ ಚುನಾಯಿತ ಮಂಡಲಿಗಳನ್ನು ರದ್ದು ಮಾಡಿ ಆಡಳಿತಾಧಿಕಾರಿಗಳನ್ನು ತರಬೇಕು ಎನ್ನುವ ಧೋರಣೆ ಮೂಲಭೂತವಾಗಿ ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುತ್ತದೆ ಎಂದು ಹೇಳಬೇಕಾಗಿದೆ. ಪ್ರಜಾಪ್ರಭುತ್ವಕ್ಕೆ ಬೆಲೆ ಕೊಡುತ್ತಿಲ್ಲ, ಮಾನ್ಯ ಮಂತ್ರಿಗಳು ಬೆಲೆ ಕೊಡುತ್ತಿಲ್ಲ, ಕಾಂಗ್ರೆಸ್ ಪಕ್ಷ ಬೆಲೆ ಕೊಡುವ ಪರಿಸ್ಥಿತಿಯಲ್ಲಿಲ್ಲ ಎಂದು ಇದರಿಂದ ಗೊತ್ತಾಗುತ್ತದೆ. ಪ್ರಜಾಪ್ರಭುತ್ವದ ಸಾವನ್ನು ನಿನ್ನೆಯ ದಿನ ಪತ್ರಿಕಾ ಪ್ರತಿನಿಧಿಗಳಿಗೂ ತೋರಿಸಿದ್ದಾರೆ. ರಾಷ್ಟ್ರಾಧ್ಯಕ್ಷರು ಬಂದಾಗ ಪತ್ರಿಕಾ ಪ್ರತಿನಿಧಿಗಳ ಬಗ್ಗೆ ಯಾವ ರೀತಿ ನಡೆದುಕೊಂಡರು ಎನ್ನುವುದು ಈ ದಿನದ ಪತ್ರಿಕೆಗಳಲ್ಲಿ ಬಂದಿದೆ. ಅವರಿಗೆ ಅವಕಾಶ ಕೊಡದೆ ಇದ್ದುದರಿಂದ ಅವರು walkout ಮಾಡಬೇಕಾಗಿ ಬಂತು. ಇದು ಪ್ರಜಾಪ್ರಭುತ್ವದಲ್ಲಿ ನಡೆಯುತ್ತಿರುವ ರೀತಿ. ಈ ರೀತಿ ನಡೆಯಬಾರದು. ನಾನು ಕೇಳಿಕೊಳ್ಳುವುದೇನೆಂದರೆ, ಸ್ಥಳೀಯ ಸಂಸ್ಥೆಗಳನ್ನು ರದ್ದು ಮಾಡಿ ಅಲ್ಲಿರುವ ಚುನಾಯಿತ ಪ್ರತಿನಿಧಿಗಳ ಸ್ಥಾನದಲ್ಲಿ ಆಡಳಿತಾಧಿಕಾರಿಗಳಿರಬೇಕು ಎನ್ನುವ ಮನೋಭಾವನೆ ಇರಬಾರದು ಎಂದು ನಾನು ಕಳಕಳಿಯಿಂದ ಕೇಳಿಕೊಳ್ಳಬೇಕಾಗಿದೆ. ಹಿಂದೆ 62 ಜನರು ಮಾಡುತ್ತಿದ್ದ ಕೆಲಸವನ್ನು ಬೆಂಗಳೂರಿನಲ್ಲಿ ಇಂದು ಇಬ್ಬರು ಮಂತ್ರಿಗಳು ಮತ್ತು ಒಬ್ಬಿಬ್ಬರು ಅಸೆಂಬ್ಲಿ ಸದಸ್ಯರು ಮಾಡಬೇಕಾಗಿದೆ. ಮಂತ್ರಿಗಳಿಗೆ ಈ ಪ್ರಶ್ನೆ ಅಷ್ಟು ದೊಡ್ಡದಲ್ಲ, ಅವರು ಏನು ಬೇಕಾದರೂ ಮಾಡಬಹುದು, ಜನರು ಟೀಕೆಮಾಡಿದರೂ ಪರವಾಗಿಲ್ಲ ಎಂಬ ಭಾವನೆ ಇದೆ. ಅವರೆ ಎಂ. ಎಲ್. ಎ. ಗಳಿಗೆ ಎಲ್ಲಾ

(ಶ್ರೀ ಎಂ. ಎಸ್. ಕೃಷ್ಣನ್)

ಡಿವಿಜನ್ನುಗಳನ್ನೂ ನೋಡಿ, ಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಡಲು ಸಾಧ್ಯವಾಗುವುದಿಲ್ಲ, ಬಹಳ ಕಷ್ಟವಾಗುತ್ತದೆ. ದೀಪ, ಚರಂಡಿ, ನಲ್ಲಿ ಎಲ್ಲೆಲ್ಲಿ ಬೇಕಾಗಿದೆ ಎಂದು ನೋಡಿ ಅದಕ್ಕೆ ತಕ್ಕ ಏರ್ಪಾಡು ಮಾಡಲು ಈಗಿರುವಂತೆ ಸಾಧ್ಯವಾಗುವುದಿಲ್ಲ. ಕಾರ್ಪೊರೇಷನ್ ಸದಸ್ಯರಿದ್ದರೆ ಹೆಚ್ಚು ಅನುಕೂಲ, ಅವರು ಎಲ್ಲ ಕಡೆಯೂ ನೋಡಿ ಜನರಿಗೆ ಬೇಕಾದ ಸೌಕರ್ಯಗಳನ್ನೊದಗಿಸುವುದಕ್ಕೆ ಅವಕಾಶವಾಗುತ್ತದೆ. ಆ ದೃಷ್ಟಿಯಿಂದ ಚುನಾವಣೆ ಕಾರ್ಪೊರೇಷನ್ನಿಗೆ ನಡೆಸುವುದು ಅವಶ್ಯಕವಾಗಿದೆ.

11-00 A.M.

ಮೂರನೆಯದು ಕಾರ್ಪೊರೇಷನ್ ವಿಚಾರದಲ್ಲಿ ಮುಖ್ಯವಾಗಿ ಎರಡು ಅಂಶಗಳನ್ನು ಗಮನದಲ್ಲಿಡಬೇಕು. ಬೆಂಗಳೂರು ಸುತ್ತಮುತ್ತಲಿದ್ದ 31 ಹಳ್ಳಿಗಳನ್ನು ಈಗ ಕಾರ್ಪೊರೇಷನ್ನಿಗೆ ಸೇರಿಸಿದ್ದಾರೆ, ಇದರಿಂದ ಅಲ್ಲಿನವರಿಗೆ ತೊಂದರೆಯಾಗಿದೆ. ಅಲ್ಲಿನ ಕಷ್ಟ ಸುಖ ಬಂದು ಕೇಳುವವರಿಲ್ಲ. ಈ ಹಳ್ಳಿಗಳನ್ನು ಸೇರಿಸಿ ಎಂದು ಗ್ರಾಮಸ್ಥರು ಕೇಳಿಕೊಳ್ಳಲಿಲ್ಲ. ಕಾಂಗ್ರೆಸಿನವರು ಚುನಾವಣೆಯಲ್ಲಿ ಗೆಲ್ಲಲು ಅವನ್ನು ಸೇರಿಸಿದರು. ಇದರ ಪರಿಣಾಮ ಆ ಹಳ್ಳಿಗಳಿಗೆ ಚರಂಡಿ, ದೀಪ, ನೀರು ಮುಂತಾದುವುಗಳ ವ್ಯವಸ್ಥೆ ಮಾಡುವವರಿಲ್ಲದೆ ತೊಂದರೆಯಾಗಿದೆ. ಅವರಿಗೆ ಅನುಕೂಲವಾಗಿದ್ದರೂ ಕೂಡ ಆ ಹಳ್ಳಿಗಳವರು ಶೇಕಡ ಹದಿನೆಂಟೂವರೆಯಷ್ಟು ತೆರಿಗೆಯನ್ನು ಕೊಡಬೇಕಾಗಿದೆ. ಅನುಕೂಲ ಮಾತ್ರ ಅದರಿಂದೇನೂ ಆಗುತ್ತಿಲ್ಲ. ಮೊದಲು ಬೇಕಾದ ಅನುಕೂಲ ಕಲ್ಪಿಸಿಕೊಟ್ಟು ಆಮೇಲೆ ತೆರಿಗೆ ಹಾಕಬೇಕು. ಯಾವಾಗಲೂ ಮಾನವೀಯ ದೃಷ್ಟಿಯಿಂದ ನೋಡಬೇಕು. ಕಾನೂನು ದೃಷ್ಟಿಯಿಂದ ನೋಡಬಾರದು.

ಇನ್ನೊಂದು ವಿಷಯ. ರೆವಿನ್ಯೂ ಸೈಟುಗಳನ್ನು ಸುಮಾರು 25 ಸಾವಿರ ಜನರು ಕೊಂಡಿದ್ದಾರೆ, ಅವರ ಪ್ರಶ್ನೆ ಬಹಳ ದೊಡ್ಡದು, ಇದನ್ನು ಬೇಕಾದಷ್ಟು ಸಲ ಹೇಳಿದೆ. ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾಯಿತವಾದ ಕಾರ್ಪೊರೇಷನ್ ಇದ್ದಿದ್ದರೆ ಅದನ್ನು ಬಗೆಹರಿಸಬಹುದಾಗಿತ್ತು. ಈಗ ಸರಕಾರದ ಆಡಳಿತಕ್ಕೆ ಕಾರ್ಪೊರೇಷನ್ ಒಳಪಟ್ಟಿರುವುದರಿಂದ ಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸಿ ಅದನ್ನು ತೀರ್ಮಾನಮಾಡಬೇಕು. ಇದಕ್ಕೆ ಪ್ರಾಶಸ್ತ್ಯ ನೀಡಿ ಜಾಗ್ರತ ತೀರ್ಮಾನಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಸಭಾಪತಿಗಳೇ, ಬೆಂಗಳೂರು ಕಾರ್ಪೊರೇಷನ್ ವಿಚಾರವನ್ನು ಈಗಾಗಲೆ ಮಾನ್ಯ ಸದಸ್ಯರು ತಿಳಿಸಿದ್ದಾರೆ. ನಾನು ಪ್ರಜಾಪ್ರಭುತ್ವದಲ್ಲಿ ಆಡಳಿತ ಯಾವ ರೀತಿ ನಡೆಸಬೇಕು, ಜನ ಯಾವ ರೀತಿ ಇರಬೇಕು, ಅವರ ವರ್ತನೆ ಹೇಗಿರಬೇಕು ಎಂಬುದನ್ನು ಮಾತ್ರ ಹೇಳುತ್ತೇನೆ. ಪ್ರಜಾರಾಜ್ಯದಲ್ಲಿ ಪ್ರಜಾಪ್ರಭುತ್ವವಿರುವುದು ಒಂದೇ ಒಂದು. ಅದು ಪ್ರಜೆಗಳಿಗೆ ಸೇರಿದ್ದು. ಕಾರ್ಪೊರೇಷನ್ ವಿಚಾರ ಹೇಳುವುದಾದರೆ, ಅದು ಪ್ರಜಾಪ್ರಭುತ್ವದ ಒಂದು ಅಂಗ. ಈಗ ಭಾರತ ದೇಶದಲ್ಲಿ ಮತ್ತು ಮೈಸೂರು ದೇಶದಲ್ಲಿ ಪ್ರಜಾಪ್ರಭುತ್ವವಿದೆ ಎಂದು ಹೇಳುವುದಾದರೆ ಬೆಂಗಳೂರು ಕಾರ್ಪೊರೇಷನ್ ಪ್ರಜಾಪ್ರಭುತ್ವಕ್ಕೆ ವಿರೋಧವಾಗಿ ನಡೆಯುತ್ತಿದೆ, ಅದು ಪ್ರಜಾಪ್ರಭುತ್ವದಲ್ಲಿ ಕಾಯಿಲೆಯಿಂದ ಕೂಡಿದ ಅಥವಾ ರೋಗಪೀಡಿತವಾದ ಹೃದಯದಿಂದ ಕೂಡಿರುವ ಸಂಸ್ಥೆಯಾಗಿದೆ. ಬೆಂಗಳೂರು ಕಾರ್ಪೊರೇಷನ್ನನ್ನು ಸೂಪರ್‌ಸೀಡ್ ಮಾಡಿ ಚುನಾವಣೆ ನಡೆಯದಂತೆ ಮಾಡಿರುವುದು ಇದಕ್ಕೆ ಕಾರಣವಾಗಿದೆ. ಇದರಿಂದ ಮೈಸೂರು ದೇಶದಲ್ಲಿರುವ ಸರಕಾರ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಅದನ್ನೂ ಸಹ ಸೂಪರ್‌ಸೀಡ್ ಮಾಡಲು ಕಾನೂನು ತರಬಹುದು. ಹಾಗೆ ಸೂಪರ್‌ಸೀಡ್ ಮಾಡಿ ನಿಜಲಿಂಗಪ್ಪನವರ ಮಂತ್ರಿಮಂಡಲ ಜನರ ಹಿತದೃಷ್ಟಿಯಿಂದ ಕೆಲಸ ಮಾಡುತ್ತಿಲ್ಲ ಎಂದು ಬೇರೆಯವರಿಗೆ ಕೇಂದ್ರ ಸರಕಾರ ಆಡಳಿತವನ್ನು ವಹಿಸಬಹುದು ಅಥವಾ ಒಬ್ಬ ಸರ್ವಾಧಿಕಾರಿಗೆ ವಹಿಸಬಹುದು. ಇದನ್ನು ಯೋಚನೆ ಮಾಡಬೇಕಾಗಿದೆ. ಆದುದರಿಂದ ಪ್ರಜಾಪ್ರಭುತ್ವಕ್ಕನುಗುಣವಾಗಿ ಕೆಲಸ ಮಾಡುವುದನ್ನು ಮೊಟ್ಟಮೊದಲು ಕಲಿಯಬೇಕೆಂದು ಮಂತ್ರಿಗಳಲ್ಲಿ ಅರಿಕೆ ಮಾಡುತ್ತೇನೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಹಕ್ಕನ್ನು ಕಾಪಾಡಬೇಕಾದ್ದು ನಮ್ಮ ಧರ್ಮ. ಪ್ರಜೆಗಳನ್ನು ದೂರ ಇರುವುದು ಸರ್ವಾಧಿಕಾರವನ್ನು ಸೂಚಿಸುತ್ತದೆ. ಬೆಂಗಳೂರು ಸಿಟಿ ಕಾರ್ಪೊರೇಷನ್ ಚುನಾವಣೆ ನಡೆಸಿದರೆ ತಮ್ಮ ಹಸ್ತದಿಂದ ಅದರ ಆಡಳಿತ ಕೈಬಿಟ್ಟುಹೋಗುತ್ತದೆಂದು ಅದನ್ನು ಸೂಪರ್‌ಸೀಡ್ ಮಾಡಿದ್ದಾರೆ. ಸರಕಾರೀ ಪಕ್ಷವೇ ಅದರ ಆಡಳಿತ ನಡೆಸಬೇಕು, ಅದನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಅವಶ್ಯಕ

ಎಂದು ಮನಸ್ಸುಮಾಡಿ ಈ ರೀತಿ ಸೂಪರ್‌ಸೀಡ್ ಮಾಡಿ ಸರಕಾರ ಆಡಳಿತವನ್ನು ನಡೆಸುತ್ತಿದೆ ಎಂಬ ಭಾವನೆ ಬಂದಿದೆ. ಎಲ್ಲರೂ ತಪ್ಪು ಮಾಡುತ್ತಾರೆ, ಸರಕಾರವೂ ತಪ್ಪು ಮಾಡುತ್ತದೆ, ಕಾರ್ಪೋರೇಷನ್ ಮಾತ್ರವಲ್ಲ, ಇದನ್ನು ಅನೇಕ ಸದಸ್ಯರು ಎತ್ತಿ ತೋರಿಸುತ್ತಿದ್ದಾರೆ. ಹಾಗಿರುವಾಗ ಬೆಂಗಳೂರು ಕಾರ್ಪೋರೇಷನ್ ತಪ್ಪು ಮಾಡಿದ್ದರೂ ಅದನ್ನು ತಿದ್ದಿಕೊಳ್ಳುವುದಕ್ಕೆ ಪ್ರಜೆಗಳಿಗೇ ಅವಕಾಶ ಕೊಡುವುದು ಸೂಕ್ತ, ಪ್ರಜಾಪ್ರಭುತ್ವದಲ್ಲಿ ಚುನಾವಣೆ ನಡೆಸಿ ಚುನಾಯಿತ ಪ್ರತಿನಿಧಿಗಳಿಗೆ ಅವಕಾಶ ಕೊಡುವುದು ಯೋಗ್ಯ, ಇಲ್ಲದಿದ್ದರೆ ಇದು ಪ್ರಜಾಪ್ರಭುತ್ವವೆನಿಸಿಕೊಳ್ಳುವುದಿಲ್ಲ ಎಂದು ಹೇಳುತ್ತೇನೆ.

Sri R. M. PATIL.—Sir, with great regard I heard the statements advanced by Sriyuths T. R. Shamanna, M. S. Krishnan and S. Bangarappa. The statement made by Sri Bangarappa is only a piece of suggestion that is to be inculcated by those who wish to represent the people undemocratic set ups. In respect of the line of thinking of Sriyuths T. R. Shamanna and M. S. Krishnan, I wish to submit that even is respect of supersession, still there are many proceedings pending before the Court. Apart from the Court proceedings, it requires not less than 1½ to 2 years to comply with the order and carry out the purpose for which the supersession is made. It is not merely to remove the body, but also to prepare grounds for fresh elections as well as to improve the conditions of the City and also to improve the administration. Yesterday's Bill, which this august House was pleased to accept, goes to show that there are certain deficiencies in the existing set up of the administration. With a view to remove those deficiencies and to augment strength in the administration, the Bill was introduced yesterday and the House was pleased to accept it. There are also certain physical improvements, tangible improvements that are to be made in the City of Bangalore, for which a schedule of work has been drawn up. With all this, I do not deny the competency or potency of the Bangaloreans to prove themselves that they will be the first class administrators when new elections are to take place. Sri Shamanna assured on the floor of the House that he is going to co-operate in electing best men. It shows that he too was not happy with those who had been represented in the Corporation. At the time when the new Mayorality in 1933 was to be held Mr. Shamanna know that the non-congress parties practiced all types of nefarious activities. If this is the practice and if this is the stuff of the party and the electorates, then with all humility I submit they do deserved to be discarded.

Sri L. SRIKANTIAH.—Who is to be discarded ?

Sri R. M. PATIL.—It is the Corporators, my dear man.

Sri L. SRIKANTIAH.—That is not what he said. Please withdraw that. He just said that electorates should be discarded.

Mr. SPEAKER.—These are all small matters. Don't take into consideration all these things. Let the debate go on.

ಶ್ರೀ ಎಲ್. ಶ್ರೀಕಂಠಯ್ಯ.—ಇವರು ಹೇಳಿದ್ದು ಸರಿಯಲ್ಲ, ಅವರು ಪ್ರಜಾಸತ್ತೆಗೆ ಕ್ಷಮಾಪಣೆ ಸಲ್ಲಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಚಿವರು ಹೇಳಿದ್ದು ಸರಿಯಲ್ಲ, ಸ್ವಾಮಿ. He is insulting the electorate. I am not criticising the Minister personally.

ಶ್ರೀ ಟಿ. ಆರ್. ಶಾಮಣ್ಣ.—ಕಾಂಗ್ರೆಸ್‌ನವರೇ ಈ ಅನಾಚಾರ ಮಾಡಿದವರು ಅಂತ ನಾವು ಹೇಳುತ್ತಾ ಇದ್ದೇವೆ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಅವರು ಈ ಸಭೆಯಲ್ಲಿ ಹೇಳಿರುವುದರ ಬಗ್ಗೆ ಕ್ಷಮಾಪಣೆ ಕೇಳಲೇಬೇಕು ಸ್ವಾಮಿ.

Mr. SPEAKER.—The member says that the Minister has to apologise. Under what rule he has to do it ?

Sri H. SIDDAVEERAPPA.—Under rule of expediency.

Sri M. S. KRISHNAN.—Under rule of democracy he has to withdraw.

Mr. SPEAKER.—It is a non-official day. Why do members intervene and lose time which may be used for the reply.

